ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015-16 ದಿನಾಂಕ: 29-12-2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಅರಸು ಮತ್ತು ಆಧುನಿಕ ಕರ್ನಾಟಕ ಕುರಿತಂತೆ ರಾಜ್ಯ ಮಟ್ಟದ ವಿಚಾರ ಸಂಕಿರಣ:<br><br>ಉದ್ಘಾಟನೆ:<br><br>ಮುಖ್ಯಮಂತ್ರಿಗಳು,<br>ಕರ್ನಾಟಕ ಸರ್ಕಾರ.<br><br>ಅಧ್ಯಕ್ಷತೆ:<br><br>ಸಮಾಜ ಕಲ್ಯಾಣ ಸಚಿವರು. | **30-12-2015**<br>ಬುಧವಾರ<br>ಬೆಳಿಗ್ಗೆ<br>10–00 ಗಂಟೆಗೆ | ಜ್ಞಾನಜ್ಯೋತಿ ಸಭಾಂಗಣ,<br>ಸೆಂಟ್ರಲ್ ಕಾಲೇಜು ಆವರಣ,<br>ಬೆಂಗಳೂರು |
| 2. | ಪ್ರಾಥಮಿಕ ವರದಿ ಸಲ್ಲಿಕೆ:<br><br>ಶ್ರೀ ವಿ.ಎಸ್. ಉಗ್ರಪ್ಪ, ವಿಧಾನ ಪರಿಷತ್ತಿನ ಸದಸ್ಯರು ಹಾಗೂ ಅಧ್ಯಕ್ಷರು, ಮಹಿಳೆ ಮತ್ತು ಮಕ್ಕಳ ಮೇಲಿನ ಶೋಷಣೆ, ದೌರ್ಜನ್ಯ, ಅತ್ಯಾಚಾರ ನಿಯಂತ್ರಿಸುವ ಮತ್ತು ವರದಿ ನೀಡುವ ತಜ್ಞರ ಸಮಿತಿ ಇವರಿಂದ ಸಮಿತಿ ಸಿದ್ಧಪಡಿಸಿರುವ 'ಪ್ರಾಥಮಿಕ ವರದಿ' ಮುಖ್ಯಮಂತ್ರಿಗಳಿಗೆ ಸಲ್ಲಿಕೆ.<br><br>ಉಪಸ್ಥಿತಿ: ಮುಖ್ಯಮಂತ್ರಿ, ಗೃಹ ಸಚಿವರು ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು | **30-12-2015**<br>ಬುಧವಾರ<br>ಮಧ್ಯಾಹ್ನ<br>1–00 ಗಂಟೆಗೆ | ಮುಖ್ಯಮಂತ್ರಿಗಳ ಕಚೇರಿ,<br>ಮೂರನೇ ಮಹಡಿ, ವಿಧಾನಸೌಧ. |
| | ಪತ್ರಿಕಾಗೋಷ್ಠಿ:<br><br>ಅಧ್ಯಕ್ಷರು ಮತ್ತು ಸದಸ್ಯರು, ವಿಧಾನ ಪರಿಷತ್ತಿನ ಸದಸ್ಯರು ಹಾಗೂ ಅಧ್ಯಕ್ಷರು, ಮಹಿಳೆ ಮತ್ತು ಮಕ್ಕಳ ಮೇಲಿನ ಶೋಷಣೆ, ದೌರ್ಜನ್ಯ, ಅತ್ಯಾಚಾರ ನಿಯಂತ್ರಿಸುವ ಮತ್ತು ವರದಿ ನೀಡುವ ತಜ್ಞರ ಸಮಿತಿ | **30-12-2015**<br>ಬುಧವಾರ<br>ಮಧ್ಯಾಹ್ನ<br>2–00 ಗಂಟೆಗೆ | ಕೊಠಡಿ ಸಂಖ್ಯೆ 338, 3ನೇ ಮಹಡಿ,<br>ವಿಧಾನಸೌಧ, ಬೆಂಗಳೂರು |

| | | | |
|---|---|---|---|
| 3 | ವಿಜ್ಞಾನಿ ಮತ್ತು ಇಂಜಿನಿಯರ್ ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭ 2013–14:<br><br><u>ಪ್ರಶಸ್ತಿ ಪ್ರದಾನ:</u><br><br>ಮುಖ್ಯಮಂತ್ರಿಗಳು,<br>ಕರ್ನಾಟಕ ಸರ್ಕಾರ.<br><br><u>ಮುಖ್ಯ ಅತಿಥಿ:</u><br><br>ಭಾರತರತ್ನ ಪ್ರೊ. ಸಿ.ಎನ್.ಆರ್. ರಾವ್, ರಾಷ್ಟ್ರೀಯ ಸಂಶೋಧನಾ ಪ್ರಾಧ್ಯಾಪಕರು, ಅಧ್ಯಕ್ಷರು, ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ, ಕರ್ನಾಟಕ ಸರ್ಕಾರ. | **30-12-2015**<br>ಬುಧವಾರ<br>ಸಂಜೆ<br>4–30 ಗಂಟೆಗೆ | ಜೆ.ಎನ್. ಟಾಟಾ ಸಭಾಂಗಣ,<br>ಭಾರತೀಯ ವಿಜ್ಞಾನ ಸಂಸ್ಥೆ,<br>ಬೆಂಗಳೂರು – 560 012. |

ನಿರ್ದೇಶಕರ ಪರವಾಗಿ

## <u>ಪತ್ರಿಕಾ ಪ್ರಕಟಣೆ</u>

## <u>'ಅರಸು ಮತ್ತು ಆಧುನಿಕ ಕರ್ನಾಟಕ'– ನಾಳೆ ರಾಜ್ಯ ಮಟ್ಟದ ವಿಚಾರ ಸಂಕಿರಣ</u>

ಬೆಂಗಳೂರು, ಡಿಸೆಂಬರ್ 29 (ಕರ್ನಾಟಕ ವಾರ್ತೆ)

ಸಮಾಜಿಕ ನ್ಯಾಯದ ಹರಿಕಾರ, ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರ ಜನ್ಮಶತಮಾನೋತ್ಸವದ ಅಂಗವಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಡಿ. ದೇವರಾಜ ಅರಸು ಜನ್ಮಶತಮಾನೋತ್ಸವ ಸಮಿತಿ ಸಹಯೋಗದೊಂದಿಗೆ, ನಾಳೆ ಅಂದರೆ, ದಿನಾಂಕ 30–12–2015ರಂದು ಬೆಂಗಳೂರು ವಿಶ್ವ ವಿದ್ಯಾನಿಲಯದ, ಸೆಂಟ್ರಲ್ ಕಾಲೇಜು ಆವರಣದಲ್ಲಿರುವ ಜ್ಞಾನಜ್ಯೋತಿ ಸಭಾಂಗಣದಲ್ಲಿ <u>'ಅರಸು ಮತ್ತು ಆಧುನಿಕ ಕರ್ನಾಟಕ'</u>– ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಹಮ್ಮಿಕೊಂಡಿದೆ, ಎಂದು ವಿಧಾನ ಪರಿಷತ್ ಸದಸ್ಯ ಹಾಗೂ ಡಿ.ದೇವರಾಜ ಅರಸು ಜನ್ಮಶತಮಾನೋತ್ಸವ ಸಮಿತಿಯ ಕಾರ್ಯಕಾರಿ ಸಮಿತಿ ಸದಸ್ಯ ಹೆಚ್ ಎಂ ರೇವಣ್ಣ ಅವರು ಇಂದು ಸುದ್ದಿಗಾರರಿಗೆ ತಿಳಿಸಿದರು.

ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೆಳಿಗೆ 10.00 ಗಂಟೆ ಉದ್ಘಾಟಿಸಲಿದ್ದಾರೆ ಎಂದ ಅವರು, ಸಮಾಜ ಕಲ್ಯಾಣ ಸಚಿವ ಹೆಚ್ ಆಂಜನೇಯ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಚಿವರಾದ ಟಿ.ಬಿ ಜಯಚಂದ್ರ, ವಿ ಶ್ರೀನಿವಾಸ ಪ್ರಸಾದ್, ಆರ್ ರೋಷನ್ ಬೇಗ್, ರಾಮಲಿಂಗಾರೆಡ್ಡಿ, ಕೆ ಜೆ ಜಾರ್ಜ್, ಉಮಾಶ್ರೀ,

ಕಿಮ್ಮನೆ ರತ್ನಾಕರ್ ಸೇರಿದಂತೆ ಸಂಸದ ಪಿ ಸಿ ಮೋಹನ್ ಹಾಗೂ ಮಹಾಪೌರರಾದ ಕೆ ಎನ್ ಮಂಜುನಾಥ್ ರೆಡ್ಡಿ ಅವರು ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಬೆಳಿಗ್ಗೆ 11.30 ಕ್ಕೆ 'ಅರಸು ರಾಜಕೀಯ ತಾತ್ವಿಕತೆ' ಕುರಿತು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ: ಬಂಜಗೆರೆ ಜಯಪ್ರಕಾಶ್ ಅವರು ವಿಚಾರ ಮಂಡನೆ ಮಾಡುವರು. ನಂತರ, 'ಅರಸು ಮತ್ತು ಅಭಿವೃದ್ಧಿ' ಕುರಿತು ಕನ್ನಡ ವಿಶ್ವ ವಿದ್ಯಾನಿಲಯದ ಪ್ರಾಧ್ಯಾಪಕರಾದ ಡಾ: ಎಂ ಚಂದ್ರ ಪೂಜಾರಿ ಅವರು ವಿಷಯ ಮಂಡನೆ ಮಾಡುವರು ಎಂದ ಹೆಚ್ ಎಂ ರೇವಣ್ಣ ಅವರು, ಜನಪದ ಚಿಂತಕರಾದ ಡಾ: ಹಿ ಶಿ. ರಾಮಚಂದ್ರೇಗೌಡ ಅವರು ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸುವರು ಎಂದು ತಿಳಿಸಿದರು.

ಮಧ್ಯಾಹ್ನ 2.30 ಕ್ಕೆ ನಡೆಯುವ 'ಅರಸು ಮತ್ತು ಸಾಮಾಜಿಕ ನ್ಯಾಯ' ಕುರಿತು ಸಂವಾದ ಗೋಷ್ಠಿಯ ಅಧ್ಯಕ್ಷತೆಯನ್ನು ಶಾಸಕ ಹಾಗೂ ಮಾಜಿ ವಿಧಾನ ಸಭಾಧ್ಯಕ್ಷರಾದ ಕೆ ಆರ್ ರಮೇಶ್ ಕುಮಾರ್ ವಹಿಕೊಳ್ಳಲಿದ್ದು, ಸಂವಾದದಲ್ಲಿ ಡಾ: ಡಾಮಿನಿಕ್, ಮಾವಳ್ಳಿ ಶಂಕರ್, ಡಾ: ಹೆಚ್ ಎಲ್ ಪುಷ್ಪ, ಕೆ ದೊರೈರಾಜ್, ಬಿ ಎಂ ಹನೀಫ್ ಹಾಗೂ ಕೆ ಎಂ ನಾಗರಾಜ್ ಅವರು ಪಾಲ್ಗೊಳ್ಳುವರು ಎಂದರು.

<u>ವರ್ಷವಿಡೀ ಕಾರ್ಯಕ್ರಮ</u> : ಜನ್ಮ ಶತಮಾನೋತ್ಸವ ಆಚರಣೆಯ ಅಂಗವಾಗಿ ವರ್ಷವಿಡೀ (20–08–2016 ರವರೆಗೆ) ಹಲವಾರು ಸಂಸ್ಕೃತಿಕ, ಸಮಾಜಿಕ ಹಾಗೂ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಆಚರಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಿರ್ಧರಿಸಿ ಉನ್ನತ ಮಟ್ಟದ ಸಮಿತಿ ರಚಿಸಿ, ಅರಸು ಅವರ ಸಮಕಾಲೀನರು, ಒಡನಾಡಿಗಳು, ಅಧಿಕಾರಿಗಳು ಹಾಗೂ ಮಾಧ್ಯಮದವರನ್ನು ಒಳಗೊಂಡಂತೆ, ವಿಶ್ವನಾಥ್ ಅವರ ಅಧ್ಯಕ್ಷತೆಯಲ್ಲಿ ಕಾರ್ಯಕಾರಿ ಸಮಿತಿ ರಚಿಸಲಾಗಿದ್ದು, ರಾಜ್ಯಾದ್ಯಂತ ಹಾಗೂ ರಾಷ್ಟ್ರಾದ್ಯಂತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ರೇವಣ್ಣ ತಿಳಿಸಿದರು.

ರಾಜ್ಯಾದ್ಯಂತ ವರ್ಷವಿಡೀ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದ ರೇವಣ್ಣ ಅವರು, ಅರಸು ಅವರ ಆಡಳಿತ ಅವಧಿಯಲ್ಲಿ ತಂದಿರುವ ಸುಧಾರಣಾ ಕಾರ್ಯಕ್ರಮಗಳು, ಅವರ ಜೀವನ , ವ್ಯಕ್ತಿತ್ವ, ವಿಚಾರಧಾರೆ ಮತ್ತು ಸಾಧನೆಗಳನ್ನು ಪುಸ್ತಕ ರೂಪದಲ್ಲಿ ಹೊರತರುವುದು ಹಾಗೂ ಇಂದಿನ ಪೀಳಿಗೆಗೆ ಅವರ ಪರಿಚಯ ಮಾಡಿಕೊಡುವ ನಿಟ್ಟಿನಲ್ಲಿ, 'ಅರಸು ನವಯುಗ ನಾಯಕ' ಎಂಬ ಶೀರ್ಷಿಕೆಯಡಿ ನೃತ್ಯ ರೂಪಕವೊಂದನ್ನು ರಚಿಸಿ ಪ್ರದರ್ಶಿಸಲಾಗುವುದು ಎಂದರು.

ಯುವ ಜನತೆಗೆ ಅರಸು ಅವರ ಕಾರ್ಯರೂಪಕ್ಕೆ ತಂದಂತಹ ಸುಧಾರಣಾ ಕಾರ್ಯಕ್ರಮಗಳನ್ನು ಮನವರಿಕೆ ಮಾಡಿಕೊಡಲು 'ಸಮತಾ ಸಮಾಜ ನಾಯಕತ್ವ ನಿರ್ಮಾಣ' ಶಿಬಿರಗಳ ಆಯೋಜನೆ ಮಾಡಲಾಗುವುದಲ್ಲದೇ, ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸಲು ರಾಜ್ಯವ್ಯಾಪಿ ಕಿರುಚಿತ್ರ ಪ್ರದರ್ಶನ, ಸಾಂಸ್ಕೃತಿಕ ಕಾರ್ಯಕ್ರಮಗಳ ತಾಲ್ಲೂಕು ಮಟ್ಟದ ಅಭಿಯಾನ ಕೈಗೊಳ್ಳಲಾಗುವುದು ಎಂದರು.

ಹೊರರಾಜ್ಯಗಳಲ್ಲಿ ಕೂಡ ಅರಸು ಜನ್ಮಶತಮಾನೋತ್ಸವ ಅಂಗವಾಗಿ ರಾಷ್ಟ್ರಮಟ್ಟದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದ ರೇವಣ್ಣ ಅವರು, ಚೆನ್ನೈ ಹಾಗೂ ಮಹಾರಾಷ್ಟ್ರದಲ್ಲಿ ಎರಡು ವಿಚಾರ

ಸಂಕಿರಣಗಳನ್ನು ನಡೆಸಲಾಗುವುದು ಹಾಗೂ ದೆಹಲಿಯಲ್ಲಿ ಬರುವ ಫೆಬ್ರವರಿಯಲ್ಲಿ ಅರಸು ಅವರ ಅಂಚೆ ಚೀಟಿ ಬಿಡುಗಡೆ ಹಾಗೂ ರಾಷ್ಟ್ರ ಮಟ್ಟದ ವಿಚಾರ ಸಂಕಿರಣ ಆಯೋಜಿಸಲಾಗುವುದು ಎಂದರು.

ಪತ್ರಿಕಾ ಗೋಷ್ಠಿಯಲ್ಲಿ ಸಮಿತಿಯ ಹಂಗಾಮಿ ಅಧ್ಯಕ್ಷ ಕೆ ಎಂ ನಾಗರಾಜು ಅವರು ಉಪಸ್ಥಿತರಿದ್ದರು.

ಪಲ್ಲವಿ:

## ಮಹಾ ಗಣಿಯಿಂದ ಕಲ್ಲಿದ್ದಲು ಗಣಿಗಾರಿಕೆ ಸುಗಮ: ಮಹಾರಾಷ್ಟ್ರ ಮು.ಮಂ ಫಡ್ನವಿಸ್ ಅವರೊಂದಿಗೆ ರಾಜ್ಯ ಇಂಧನ ಸಚಿವರ ಭೇಟಿ ಫಲಕಾರಿ

ಬೆಂಗಳೂರು, ಡಿಸೆಂಬರ್ 29 (ಕರ್ನಾಟಕ ವಾರ್ತೆ)

ಕರ್ನಾಟಕದ ಇಂಧನ ಸಚಿವ ಡಿ.ಕೆ. ಶಿವಕುಮಾರ್ ಅವರು ಇಂದು ಬೆಳಗ್ಗೆ ಮುಂಬೈನ ಮಂತ್ರಾಲಯದಲ್ಲಿ ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಪಡ್ನವಿಸ್ ಅವರೊಂದಿಗೆ ಮಾತುಕತೆ ನಡೆಸಿ ಕರ್ನಾಟಕದ ಕಲ್ಲಿದ್ದಲು ಬೇಡಿಕೆಗೆ ಅವಶ್ಯಕವಾದ ಕಲ್ಲಿದ್ದಲು ನಿಕ್ಷೇಪವನ್ನು ಮಹಾರಾಷ್ಟ್ರದ ಗಣಿಗಳಿಂದ ಹೊರ ತೆಗೆಯಲು ಇದ್ದ ಅಡ್ಡಿ ಆತಂಕಗಳನ್ನು ನಿವಾರಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಕೇಂದ್ರ ರಸಾಯನಿಕ ಖಾತೆ ರಾಜ್ಯ ಸಚಿವರು ಹಾಗೂ ಚಂದ್ರಾಪುರದ ಸಂಸತ್ ಸದಸ್ಯರು ಆದ ಹಂಸರಾಜ್ ಅಹಿರ್, ಮಹಾರಾಷ್ಟ್ರ ಸರ್ಕಾರದ ಗಣಿ ಖಾತೆ ಸಚಿವರು ಹಾಗೂ ಇತರ ಉನ್ನತ ಅಧಿಕಾರಿಗಳ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಕೇಂದ್ರ ಸರ್ಕಾರದಿಂದ ಕರ್ನಾಟಕ ರಾಜ್ಯದ ಉಷ್ಣ ವಿದ್ಯುತ್ ಸ್ಥಾವರಗಳಿಗೆ ಅಗತ್ಯವಾದ ಕಲ್ಲಿದ್ದಲನ್ನು ಪೂರೈಸಲು ಮಹಾರಾಷ್ಟ್ರದ ಚಂದ್ರಾಪುರ ಜಿಲ್ಲೆಯಲ್ಲಿನ ಬಾರಂಜ್, ಮನೋರಾದೀಪ್ ಹಾಗೂ ಖೇಲೋನ್ನ ಸೇರಿದಂತೆ ಆರು ಕಲ್ಲಿದ್ದಲು ನಿಕ್ಷೇಪಗಳನ್ನು ಮಂಜೂರು ಮಾಡಲಾಗಿದ್ದು, ಈ ನಿಕ್ಷೇಪಗಳಿಂದ ಕಲ್ಲಿದ್ದಲನ್ನು ಹೊರಗೆ ತೆಗೆಯಲು ಸ್ಥಳೀಯವಾಗಿ ಇದ್ದ ಅಡ್ಡಿ ಆತಂಕಗಳನ್ನು ನಿವಾರಿಸಲು ತೀರ್ಮಾನಿಸಲಾಯಿತು.

ಕೇಂದ್ರ ಸರ್ಕಾರ ಈ ಹಿಂದೆಯೆ ಬಳ್ಳಾರಿ ವಿದ್ಯುತ್ ಘಟಕ ಸೇರಿದಂತೆ ಕರ್ನಾಟಕದ ಶಾಖೋತ್ಪನ್ನ ವಿದ್ಯುತ್ ಘಟಕಗಳಿಗೆ ಈ ಕಲ್ಲಿದ್ದಲು ನಿಕ್ಷೇಪಗಳಲ್ಲಿ ಗಣಿಗಾರಿಕೆ ನಡೆಸಿ ಕಲ್ಲಿದ್ದಲನ್ನು ಸಂಗ್ರಹಿಸಿ ಕರ್ನಾಟಕಕ್ಕೆ ಸಾಗಾಣೆ ಮಾಡಲು ಅನುಮತಿ ನೀಡಿದ್ದರೂ ಕೂಡ ಹಲವು ಸ್ಥಳೀಯ ಸಮಸ್ಯೆಗಳಿಂದಾಗಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (ಕೆ.ಪಿ.ಸಿ.ಎಲ್) ಇಲ್ಲಿಯವರೆಗೂ ತನ್ನ ಪಾಲಿನ ಕಲ್ಲಿದ್ದಲನ್ನು ಹೊರ ತೆಗೆಯಲು ಸಾಧ್ಯವಾಗದೆ ತೊಂದರೆ ಅನುಭವಿಸಿದ್ದ ಹಿನ್ನೆಲೆಯಲ್ಲಿ ಇಂದಿನ ಈ ಸಭೆ ಅಧಿಕ ಮಹತ್ವ ಪಡೆದುಕೊಂಡಿದೆ ಎಂದು ಸಚಿವಾಲಯ ಪ್ರಕಟಣೆ ತಿಳಿಸಿದೆ.

ಪಲ್ಲವಿ

## Picture Caption: (Pics Attached separately)

Karnataka Energy Minister Sri D K Shivakumar along with team of officials from Karnataka today met Maharashtra Chief Minister, Devendra Fhadnavis and discussed with regard to removing constraints in mining and transportation of Coal allocated to Karnataka from Maharashtra based coal mines. Central Minister of State for Chemical Fertilizer Hamsaraj Aheer, and other Maharashtra ministers were present during the meeting.

Karnataka was allocated coal resources, from coal mines situated in Bharanj, Manoradeep and Kailonya in Chandrapur district of Maharashtra. Due to few local hindrances, Karnataka was not allowed to carry out mining and transportation of coal. Hence, Karnataka Government sought the intervention of Maharashtra Chief Minister to resolve the impending crisis.

## ಬೇಕರಿ ತರಬೇತಿ

**ಬೆಂಗಳೂರು, ಡಿಸೆಂಬರ್ 29 (ಕರ್ನಾಟಕ ವಾರ್ತೆ)**

**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಇವರ ಬೇಕರಿ ತರಬೇತಿ ಘಟಕದ ವತಿಯಿಂದ 4 ವಾರಗಳ ಬೇಕರಿ ತರಬೇತಿ ಕಾರ್ಯಕ್ರಮವನ್ನು ಆಸಕ್ತಿಯುಳ್ಳ ಬೇಕರಿದಾರರಿಗೆ ಉದ್ದಿಮೆ ಮತ್ತು ಗೃಹಿಣಿಯರಿಗಾಗಿ ಆಯೋಜಿಸಲಾಗಿದೆ.**

[

**ತರಬೇತಿಯು 4–1–2016 ರಿಂದ ಪ್ರಾರಂಭವಾಗಲಿದೆ. ಈ ತರಬೇತಿಯಲ್ಲಿ ಬ್ರೆಡ್, ಬನ್, ಪಪ್ಸ್, ಕೇಕ್‌ಗಳು, ವಿಶೇಷ ಬಿಸ್ಕತ್ತುಗಳು, ರೋಲ್ಸ್‌ಗಳು ಮತ್ತಿತರ ಆಕರ್ಷಕ ಬೇಕರಿ ಪದಾರ್ಥಗಳ ತಯಾರಿಕೆಯನ್ನು ಕಲಿಸಲಾಗುವುದು.**

**ಅಭ್ಯರ್ಥಿಗಳು ಸ್ವತ: ಪದಾರ್ಥ ತಯಾರಿಸುವ ಮೂಲಕ ಕಲಿಯುವ ಸೌಲಭ್ಯವಿದೆ. ಯಾವುದೇ ವಿದ್ಯಾರ್ಹತೆ ಅವಶ್ಯಕತೆಯಿಲ್ಲ. ತಯಾರಿಕೆಗೆ ಬೇಕಾದ ಕಚ್ಚಾ ಪದಾರ್ಥಗಳನ್ನು ತರಬೇತಿ ಘಟಕದಲ್ಲೇ ಒದಗಿಸಲಾಗುವುದು. ಹೆಚ್ಚಿನ ವಿವರಗಳಿಗೆ ಸಂಯೋಜಕರು, ಬೇಕರಿ ತರಬೇತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯದ, ಕೃಷಿ ವಿಶ್ವವಿದ್ಯಾನಿಲಯ, ಹೆಬ್ಬಾಳ, ಬೆಂಗಳೂರು – 560 024, ಇವರನ್ನು ಖುದ್ದಾಗಿ ಅಥಾವ ದೂರವಾಣಿ ಸಂಖ್ಯೆ 23513370 ಮೂಲಕ ಕಚೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.**

**ಪಲ್ಲವಿ:ಕವನ::ಜಿಪಿಆರ್**

## BAKING COURSE

Bangalore, December 29, (Karnataka Information)

**The Bakery Training Unit., Hebbal, Bangalore is conducting 4 weeks training course on Bakery Technology for the benefit of Housewives and Entrepreneurs from 4th January 2016.**

**Bakery products like special Biscuits, Bread Rolls, Puffs, Cakes and fancy items will be taught during the course. Participants will be allowed to learn by preparing the products by themselves.**

**The interested persons can contact Coordinator in person or through telephone no 23513370 during office hours.**

**Pallavi:kavanna.gpr.**